ಮೈಸೂರು ಶ್ರೀಮನ್ ಮಹಾರಾಜರವರ ದಿವಾನ್‌ರವರಿಂದ ಸಾದರ್‌ಮಾಡಲ್ಪಟ್ಟ ಪ್ರೊಸಿಡಿಂಗ್ಸ್.

(ರೆವಿನ್ಯೂ) ತಾರೀಖು 9ನೇ ಆಗಸ್ಟು 1887ನೇ ಇಸವಿ.

ನಂಬರ್. 2709—18—72 ಮಲ್ಕುಂ 9ನೇ ಆಗಸ್ಟು 1887.

ಹುಕ್ಕುಂ.—1874ನೇ ಇಸವಿ ಫೆಬ್ರವರೀ 13ನೇ ಮಲ್ಕುಂ 292ನೇ ನಂಬರ್ ಇಸ್ತಿಹಾರ್‌ನಾಮೆಯಿಂದ, 1872ನೇ ಇಸವಿ ಅ ಕ್ಟೋಬರ್ 12ನೇ ಮಲ್ಕುಮಿಗೆ ಮುಂಚೆ ಇನಾಂ ಟೈಟಲ್‌ಡೀಡ್‌ಗಳು ಕೊಡಲ್ಪಡದಂಥಾ ತಮಾಂ ಪೂರಾ ಇನಾಂ ಗ್ರಾಮಗಳೂ, ಅವುಗಳ ಗೋಕ್ತರ ವಸೂಲ್ ಮಾಡಲ್ಪಡಬೇಕಾದ ಕ್ವಿಟ್‌ರೆಂಟ್ ತೀರ್ವೆಯು ಆಬ್ಯೆರಾಗಿ ಠರಾವ್ ಮಾಡುವದಕ್ಕೆ ಮುಂಚಿತವಾಗಿ ಸರ್ವೇ ಇಲಾಖೆಯಿಂದ ಪೋಜಣೀ ಮಾಡಲ್ಪಟ್ಟು ಹುಟ್ಟುವಳೀ ಅಂದಾಜು ಮಾಡಲ್ಪಡತಕ್ಕದ್ದೆಂದೂನ್ನೂ ಅದರಿಂದೀಚೆಗೆ ಇನಾಂ ಇಲಾಖೇಯಿಂದ ನಡಿಸಲ್ಪಟ್ಟ ತಮಾಂ ಫೈಸಲಾತಿಗಳೂ ಆಡ್ ಯಿಂಟರಿಂಯಾನೀ ಹಂಗಾಮೀ ಯುಂಬುದಾಗಿ ಭಾವಿಸಲ್ಪಡತಕ್ಕದ್ದೆಂತಲೂ ಹುಕ್ಕುಂ ಮಾಡಲ್ಪಟ್ಟಿರುತ್ತೆ.

2. ಸರ್ವೇ ಇಲಾಖೇಯವರು ಯಾವ ಕ್ರಮ ಅನುಸರಿಸಿ, ಇನಾಂ ಗ್ರಾಮಗಳ ಹುಟ್ಟುವಳೀ ಅಂದಾಜು ಮಾಡಿದರೋ ಅಂ ಥಾ ಕ್ರಮವು 1881ನೇ ಇಸವಿಯಲ್ಲಿ ಚರ್ಚಿಸಲ್ಪಟ್ಟು, 1874ನೇ ಇಸವಿ ಫೆಬ್ರವರೀ 13ನೇ ಮಲ್ಕುಮಿನ ಇಸ್ತಿಹಾರ್‌ನಾಮೇ ಅನು ಸಾರವಾಗಿ ಸದರೀ ಇಲಾಖೇಯಿಂದ ಮಾಡಲ್ಪಟ್ಟ ಕ್ವಿಟ್‌ರೆಂಟಿನ ಆಖೈರು ಫೈಸಲಾತಿಯು, ಪರಿಷ್ಕರಿಸಲ್ಪಡತಕ್ಕದ್ದೆಂತಲೂ ಹುಟ್ಟುವಳೀ ಅಂದಾಜು ಕೆಲಸಗಳಿಗೆ ಗೋಕ್ತರ ಇನಾಂ ಗ್ರಾಮದಲ್ಲಿ ಸಾಗುವಳೀಲಿರುವ ಜಮೀರ್ಗಳ ಸರ್ವೇ ಕಂದಾಯವನ್ನೂ ಮತ್ತು ಸಾಗುವಳೀ ಲಾಯ ಖಾಪ ಬಂಜರ್ ಜಮೀನಿನ ಕಂದಾಯದ ಪೈಕೀ ಕೀಕಡಾ 25ರ ಪ್ರಕಾರ ಆಗುವ ಮೊಬಲಗು ದೇಖೀಲ್ ಸಾಗುವಳೀ ಲಾಯಖಾದ ಜಮೀ ನಿನ ಮೇಲೆ ಯುಕ್ತವಾದ ಹುಲ್ಲುಬನ್ನಿಯನ್ನೂ ಸುದಾ ತೆಗದುಕೊಳ್ಳಲ್ಪಡತಕ್ಕದ್ದೆಂತ 1881ನೇ ಇಸವಿ ಸೆಪ್ಟೆಂಬರ್ 2ನೇ ಮಲ್ಕುಂ 4701—9—133ನೇ ನಂಬರು ಪ್ರೊಸಿಡಿಂಗ್ಸ್‌ನಲ್ಲಿ ಹುಕ್ಕುಂ ಮಾಡಲ್ಪಟ್ಟಿರುತ್ತೆ; ಮತ್ತು ಅಂಥಾ ಪರಿಷ್ಕರಿಸಲ್ಪಟ್ಟ ಹುಟ್ಟುವಳೀ ಅಂದಾಜು ತಯಾರಾಗುವ ನಿರೀಕ್ಷಣೀ ಮೇಲೆ ಕ್ವಿಟ್‌ರೆಂಟ್ ವ ಲೋಕಲ್‌ಫಂಡ್‌ಸೆಸ್ ಸುದಾ ಲಿಖ್ತದಲ್ಲಿ ದಾಖಲಾಗಿರುವ ಮೊಜೇ ಹುಟ್ಟುವಳೀ ಮೇಲೆ ವಸೂಲ್ ಮಾಡಲ್ಪಡತಕ್ಕದ್ದೆಂದು ಅಪ್ಪಣೀ ಮಾಡಲ್ಪಟ್ಟಿರುತ್ತೆ.

3. ಕೆಲವು ಇನಾಂ ಗ್ರಾಮಗಳ ಹಿಡುವಳೀದಾರರು, 1881ನೇ ಇಸವಿ ಸೆಪ್ಟೆಂಬರ್ 2ನೇ ಮಲ್ಕುಮಿನ ಪ್ರೊಸೀಡಿಂಗ್ಸಿನಲ್ಲಿ ಹು ಕ್ಕುಂ ಮಾಡಲ್ಪಟ್ಟ ಪರಿಷ್ಕರಿಸಲ್ಪಟ್ಟ ಫೈಸಲಾತಿಯು ಅದ್ಯಾಪೀ ಪೂರ್ತಿಯಾಗಲಿಲ್ಲವೆಂಬ ನೆಪದಮೇಲೆ ಕ್ವಿಟ್‌ರೆಂಟ್ ಮತ್ತು ಲೋಕಲ್‌ಫಂಡ್ ಸೆಸ್ ಮೊಬಲಗನ್ನು ಪೂವತೀ ಮಾಡದೇ ಉಳಿಸಿಕೊಳ್ಳುವ ಬಗ್ಗೆ ಅವಕಾಶ ಕೊಡಲ್ಪಟ್ಟಿರುತ್ತಾರೆಂಬದಾಗಿ ದಿವಾನ್‌ರವರ ಜಾಹಿರಾತಿಗೆ ಒಂ ದು ಯಿರುತ್ತೆ. ಪರಿಷ್ಕರಿಸಲ್ಪಟ್ಟ ಅಂದಾಜು ಹುಟ್ಟುವಳೀ ಠರಾವಾಗುವ ನಿರೀಕ್ಷಣೀ ಮೇಲೆ ಕ್ವಿಟ್‌ರೆಂಟ್ ಮತ್ತು ಲೋಕಲ್ ಫಂಡ್ ಸೆಸ್ ಸುದಾ ಸದರೀ ಗ್ರಾಮದ "ಗೋಕ್ತಾದ ಮೊಜೇ ಹುಟ್ಟುವಳೀ" ಮೇಲೆ ವಸೂಲ್ ಮಾಡಲ್ಪಡತಕ್ಕದ್ದೆಂದು ನಿಯಮಿಸುವ ಮೇಲ್ಕಂಡ ಪ್ರೊ ಸೀಡಿಂಗ್ಸಿನ ೫ನೇ ಪ್ಯಾರಾವಿಗೆ ಡೆಪ್ಯುಟಿ ಕಮ್ಮಿಷನರುಗಳು ಮುಖ್ಯವಾಗಿ ನಿಗೇ ಕೊಡಲ್ಪಡಬೇಕಾಗಿರುತ್ತೆ. ನಿಲ್ಲಿಸಿ ಯಿಡಲ್ಪಡತಕ್ಕದ್ದೆಂಬ ದಾಗಿ ಹುಕ್ಕುಂ ಮಾಡಲ್ಪಟ್ಟದ್ದೇನಂದರೆ, 1874ನೇ ಇಸವಿ ಫೆಬ್ರವರೀ 13ನೇ ಮಲ್ಕುಂ 292ನೇ ನಂಬರ್ ಇಸ್ತಿಹಾರ್‌ನಾಮೇ ಅನುಸರಿಸಿ ಗ್ರಾಮದ ಸರ್ವೇ ಅಂದಾಜೆ ಹುಟ್ಟುವಳೀ ಮೇಲೆ ಲೆಖ್ತ ಮಾಡಲ್ಪಟ್ಟ ಕ್ವಿಟ್‌ರೆಂಟ್ ಮತ್ತು ಲೋಕಲ್‌ಫಂಡ್ ಸೆಸ್ಸುಗಳು.

4. 1872ನೇ ಇಸವಿ ಅಕ್ಟೋಬರ್ 12ನೇ ಮಲ್ಕುಮಿಗೆ ಮುಂಚಿತವಾಗಿ ಇನಾಂ ಟೈಟಲ್‌ಡೀಡ್‌ಗಳು ಕೊಡಲ್ಪಟ್ಟಿಂಥಾ ಗ್ರಾಮ ಗಳ ಇನಾಮತೀ ಫೈಸಲಾತಿಯು ಪುನಹ ಪ್ರಾರಂಭಿಸಲ್ಪಡಕೂಡದು, ಮತ್ತು ಅವುಗಳ ವಿಷಯದಲ್ಲಿ ಕೊಡಲ್ಪಟ್ಟಿರುವ ಇನಾಂ ಟೈಟಲ್ ಡೀಡ್‌ಗಳಲ್ಲಿ ದಾಖಲ್ಮಾಡಲ್ಪಟ್ಟಿರುವ ಜೇರೀಜಿನ ಮೇಲೆ ಕ್ವಿಟ್‌ರೆಂಟ್ ಮತ್ತು ಲೋಕಲ್‌ಫಂಡ್ ಸೆಸ್ ಸುದಾ ವಸೂಲ್ಮಾಡಲ್ಪಡತಕ್ಕದ್ದು.

5. ಇತರ ಇನಾಂ ಗ್ರಾಮಗಳ ವಿಷಯದಲ್ಲಿ 1881ನೇ ಇಸವಿ ಸೆಪ್ಟೆಂಬರ್ 2ನೇ ಮಲ್ಕುಂ 4701—9—133ನೇ ನಂಬರ್ ಪ್ರೊಸೀಡಿಂಗ್ಸ್‌ನಲ್ಲಿ ಅಪ್ಪಣೀ ಮಾಡಲ್ಪಟ್ಟ ಪರಿಷ್ಕರಿಸಲ್ಪಟ್ಟ ಆಖೈರ್ ಅಂದಾಜ್ ಹುಟ್ಟುವಳೀ ಗೊತ್ತು ಮಾಡಲ್ಪಡುವ ನಿರೀಕ್ಷಣೀ ಮೇಲೆ, ಹಾಲೀ ಇನಾಂ ಇಲಾಖೇಯಿಂದ ಗೊತ್ತು ಮಾಡಲ್ಪಟ್ಟಿರುವ ಹುಟ್ಟುವಳೀ ಮೇಲೆ ಕ್ವಿಟ್‌ರೆಂಟ್ ಮತ್ತು ಲೋಕಲ್‌ಫಂಡ್ ಸೆಸ್ ವಸೂಲ್ಮಾಡ ಲ್ಪಡತಕ್ಕದ್ದು.

6. ಡೆಪ್ಯುಟಿ ಕಮ್ಮಿಷನರ್‌ಗಳು, ಯಿದುವರಿಗೆ ಕ್ವಿಟ್‌ರೆಂಟ್ ಮತ್ತು ಲೋಕಲ್‌ಫಂಡ್ ಸೆಸ್ ಪೂವತೀ ಮಾಡಲ್ಪಡದೇ ಬಾಕೀಲಿರುವ ಸಂಗತಿಗಳಲ್ಲಿ ಮೇಲ್ಕಂಡ ಹುಕ್ಕುಂ ಅನುಸರಿಸಿ ಅವುಗಳನ್ನ ಕೂಡ್ಲೇ ವಸೂಲ್ಮಾಡುವ ತರದೂದ್ ನಡಿಸಬೇಕೆಂದು ನಿಯಮಿಸಲ್ಪಟ್ಟಿರು ತ್ತಾರೆ.

ಆರ್. ವಿಜಯೊಂದ್ರರಾವ್,
ಚೀಫ್ ಸೆಕ್ರಿಟೇರಿ.